**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಷ್ಟಗಿ.**

ದಿನಾಂಕ: **2** ನೇ ಜುಲೈ, **2022**

ಅಪರಾಧಿಕ ಪ್ರಕರಣ ಸಂಖ್ಯೆ: **201/2020**

ರಾಜ್ಯ ಸರ್ಕಾರದ ಪರವಾಗಿ :

ವೃತ್ತ ನಿರೀಕ್ಷಕರು,
ಕುಷ್ಟಗಿ ವೃತ್ತ,
ಕುಷ್ಟಗಿ. .... ಫಿರ್ಯಾದಿದಾರರು

ವಿರುದ್ಧ

ರಾಘವೇಂದ್ರ ಮತ್ತು ಇನ್ನೊಬ್ಬರು, ........ ಆರೋಪಿತರು

1 ನೇ ಆರೋಪಿ: ರಾಘವೇಂದ್ರ
ತಂದೆ: ಗಂಗಪ್ಪ ಹನಗಿ,
ಪ್ರಾಯ: 35 ವರ್ಷ,
ವಾಸ: ನೇಕಾರಪೇಟೆ, ಕೆರೂರು,
ಬಾದಾಮಿ ತಾಲೂಕು, ಬಾಗಲಕೋಟೆ ಜಿಲ್ಲೆ.

2 ನೇ ಆರೋಪಿ: ಪರಸಪ್ಪ ಯಾನೆ ಪರಶುರಾಮ
ತಂದೆ: ಹನಮಪ್ಪ ಶಾಂತಗೇರಿ,
ಪ್ರಾಯ: 30 ವರ್ಷ,
ವಾಸ: ಹನಮನಾಳ ಗ್ರಾಮ,
ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ.

## ಆಪಾದನೆಯ ಸಾರಾಂಶ

ದಿನಾಂಕ: ***04.11.2019*** ರಂದು ಸಂಜೆ ***6-10*** ಗಂಟೆ ಸಮಯದಲ್ಲಿ ***1*** ನೇ ಆರೋಪಿಯಾದ ನೀವು ಲಾರಿ ನೋಂದಣಿ ಸಂಖ್ಯೆ ಕೆಎ ***25***-ಸಿ-***0816*** ನ್ನು ಹನಮನಾಳ ಗುಡೂರು ರಸ್ತೆಯಲ್ಲಿ ಅತೀವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ಹನಮನಾಳ ಬಸ್ ನಿಲ್ದಾಣದ ಮುಂದುಗಡೆ ***2*** ನೇ ಆರೋಪಿಯು ತನ್ನ ಬಾಬ್ತು ಹಿರೋ ಹೆಚ್.ಎಫ್ ಡೀಲಕ್ಸ ಮೋಟಾರ ಸೈಕಲ್ ನೊಂದಣಿ ಸಂಖ್ಯೆ:ಕೆಎ-***37***-ಎಹೆಚ್-***6866*** ರಲ್ಲಿ ಪರಸಪ್ಪರವರನ್ನು ಸಹ ಸವಾರನಾಗಿ ಕುಳ್ಳಿರಿಸಿಕೊಂಡು ಅತೀವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ಲಾರಿಯ ಮುಂದಿನ ಬಲಭಾಗಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ ***279*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಅಪಘಾತಪಡಿಸಿದ ಪರಿಣಾಮ ಮೋಟಾರ ಸೈಕಲನ ಸಹ ಸವಾರನಾದ ಪರಸಪ್ಪ ರವರ ಮೇಲೆ ಲಾರಿಯು ಹಾಯ್ದು ಹೋಗಿ ಸ್ಥಳದಲ್ಲಿ ಮೃತಪಟ್ಟಿದ್ದು, ಆ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ ***304(ಎ)*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಮೂರನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ***1*** ನೇ ಆರೋಪಿಯು ಅಪಘಾತದ ಗಾಯಾಳುವನ್ನು ಹತ್ತಿರದ ಆಸ್ಪತ್ರೆಗೆ ಸೇರಿಸದೆ ಮತ್ತು ಅಪಘಾತದ ವಿಷಯವನ್ನು ಹತ್ತಿರದ ಪೊಲೀಸ್ ಠಾಣೆಗೆ ತಿಳಿಸದೆ ಲಾರಿಯನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ಆ ಮೂಲಕ ***1*** ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ ***187*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ನಾಲ್ಕನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ***2*** ನೇ ಆರೋಪಿಯಾದ ನೀವು ಚಾಲನಾ ಅನುಜ್ಞಾಪತ್ರವನ್ನು ಹೊಂದದೆ ನಿಮ್ಮ ಬಾಬ್ತು ಹಿರೋ ಹೆಚ್.ಎಫ್ ಡೀಲಕ್ಸ ಮೋಟಾರ ಸೈಕಲ್ ನೊಂದಣಿ ಸಂಖ್ಯೆ:ಕೆಎ-***37***-ಎಹೆಚ್-***6866*** ವಾಹನವನ್ನು ಚಲಾಯಿಸಿದ್ದು, ಆ ಮೂಲಕ ***2*** ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ ***181*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಐದನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ***2*** ನೇ ಆರೋಪಿಯಾದ ನೀವು ನೊಂದಣಿ ಫಲಕ ಹೊಂದದೆ ನಿಮ್ಮ ಬಾಬ್ತು ಹಿರೋ ಹೆಚ್.ಎಫ್ ಡೀಲಕ್ಸ ಮೋಟಾರ ಸೈಕಲ್ ನೊಂದಣಿ ಸಂಖ್ಯೆ:ಕೆಎ-***37***-ಎಹೆಚ್-***6866*** ವಾಹನವನ್ನು ಚಲಾಯಿಸಿದ್ದು, ಆ ಮೂಲಕ ***2*** ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ ***192*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದನೆ ಇದೆ.

(ಈ ಮೇಲಿನ ಆಪಾದನೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ, ವಿವರಿಸಿ ಹೇಳಿ ಅವರು ನೀಡಿದ ಉತ್ತರವನ್ನು ಪ್ರತ್ಯೇಕವಾಗಿ ಬರೆದುಕೊಳ್ಳಲಾಗಿದೆ ಅಂತ ದೃಢೀಕರಿಸುತ್ತೇನೆ)

ಹೆಚ್ಚುವರಿ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.
ಕುಷ್ಟಗಿ